# ಅವಸರದ ಬುದ್ಧಿಗೆ ತಕ್ಕ ಪಾಠ

ಒಮ್ಮೆ ಒಬ್ಬ ರಾಜ ಮತ್ತು ಅವನ ಮಂತ್ರಿ ಮಾರುವೇಷದಲ್ಲಿ ಕಾಡುಮೇಡುಗಳಲ್ಲಿ ಸುತ್ತಾಡುತ್ತಿದ್ದಾಗ ದಾರಿ ತಪ್ಪಿತು. ಬಹಳ ದೂರ ಕ್ರಮಿಸಿದಾಗ ದೂರದಲ್ಲೊಂದು ಪುಟ್ಟ ಗುಡಿಸಲು ಕಂಡಿತು. ಸದ್ಯ, ಯಾರೋ ಇದ್ದಾರೆ ಎಂದುಕೊಂಡು ಮೆಲ್ಲಗೆ ಬಾಗಿಲನ್ನು ತಳ್ಳಿ ಒಳ ಹೊಕ್ಕು ನೋಡಿದಾಗ ಒಬ್ಬ ವಯಸ್ಸಾದ ಅಜ್ಜನು ಕುಳಿತಿದ್ದನು.

ರಾಜನು ಬಂದರೂ ಈ ಮುದುಕ ಎದ್ದು ನಮಸ್ಕಾರ ಸಹ ಹೇಳದೆ ಇದ್ದಾನಲ್ಲ ಎಂದು ಕುಪಿತನಾದ ಮಂತ್ರಿ 'ಏ ಮುದುಕ, ಇವರು ಬಂದಿದ್ದಾರೆ, ನಮಸ್ಕಾರ ಹೇಳುವುದಿಲ್ಲವಾ?' ಎಂದು ಕೇಳಿದ.

ಅಜ್ಜ 'ಹೇಳದೆ ಕೇಳದೆ ಒಳಗೆ ಬಂದದ್ದು ನೀವುಗಳು. ಅದಕ್ಕೆ ನಾನ್ಯಾಕೆ ನಿಮಗೆ ನಮಸ್ಕಾರ ಹೇಳಬೇಕು?' ಎಂದ.

ರಾಜನು ಸುಮ್ಮನಿರು ಎಂದು ಸಂಜ್ಞೆ ಮಾಡಿದರೂ, ಆ ಮಂತ್ರಿ ಬಿಡದೆ 'ಇವರ ಹತ್ತಿರ ಅಪಾರ ದುಡ್ಡಿನ ಗಂಟಿದೆ. ಅದಕ್ಕಾದರೂ ನಮಸ್ಕಾರ ಹೇಳುತ್ತೀಯಾ'? ಎಂದು ಕೇಳಿದಾಗ, 'ದುಡ್ಡಿದ್ದರೆ ಅವನದಾಯ್ತು. ಅದಕ್ಕೆ ನಾನ್ಯಾಕೆ ವಂದಿಸಬೇಕು' ಎಂದು ಅಜ್ಜ ಮರು ನುಡಿದ.

ಮಂತ್ರಿ ಆ ಗಂಟಿನಿಂದ ಒಂದು ನಾಣ್ಯ ತೆಗೆದು ಕೊಟ್ಟು 'ಈಗಲಾದರೂ ನಮಸ್ಕಾರ ಮಾಡು' ಎಂದಾಗ, 'ಅಷ್ಟೊಂದು ದುಡ್ಡು ಇಟ್ಕೊಂಡು, ಕೇವಲ ಒಂದೇ ಒಂದು ನಾಣ್ಯ ಕೊಟ್ಟ ಈ ಜಿಪುಣನಿಗೆ ನಾನು ನಮಸ್ಕಾರ ಮಾಡಲ್ಲ' ಎಂದ ಅಜ್ಜ.

'ಸರಿ ಸರಿ' ಎಂದ ಮಂತ್ರಿ ಆ ಗಂಟಿನಲ್ಲಿದ್ದ ಅರ್ಧದಷ್ಟು ದುಡ್ಡನ್ನು ತೆಗೆದು ಕೊಟ್ಟಾಗ, ಅಜ್ಜ 'ಈಗ ನಮ್ಮಿಬ್ಬರ ಹತ್ತಿರ ಸರಿಸಮಾನವಾಗಿ ಹಣವಿದೆ. ಆದ್ದರಿಂದ ನಾನು ಇವನಿಗೆ ಯಾಕೆ ವಂದಿಸಬೇಕು?' ಎಂದು ಪ್ರಶ್ನಿಸಿದ.

ಆಗ ಮಂತ್ರಿಯು 'ಸರಿ, ಪೂರ್ತಿಯಾಗಿ ಹಣವನ್ನು ನೀನೇ ತೆಗೆದುಕೊ. ಈಗಲಾದರೂ ಇವನಿಗೆ ವಂದಿಸು' ಎಂದಾಗ, ಆ ಮುದುಕನು 'ಈಗ ನನ್ನ ಹತ್ತಿರ ಎಲ್ಲಾ ಹಣವಿದೆ. ಆದ್ದರಿಂದ ಈಗ ಅವನೇ ನನಗೆ ನಮಸ್ಕರಿಸಬೇಕು. ನಾನ್ಯಾಕೆ ನಮಸ್ಕರಿಸಲಿ? ಎಂದ.

ಆಗ ಮಂತ್ರಿಯು ಕ್ರೋಧಗೊಂಡು 'ಏ, ಮುದುಕಾ, ಇವರು ಯಾರು ಗೊತ್ತಾ? ಈ ಪ್ರಾಂತ್ಯದ ರಾಜ' ಎಂದಾಗ, ಆ ಮುದುಕನು 'ಮಹಾರಾಜರೇ, ಕ್ಷಮಿಸಿರಿ. ನೀವುಗಳು ಒಳಗೆ ಬಂದಾಗಲೇ ನೀವಿಬ್ಬರೂ



ಮಾರುವೇಷದಲ್ಲಿರುವುದು ಗೊತ್ತಾಯಿತು. ಆದರೆ, ಈ ಮಂತ್ರಿಯ ಧೋರಣೆ, ಅವಸರದ ಬುದ್ಧಿಗೆ ಸ್ವಲ್ಪ ಪಾಠ ಕಲಿಸೋಣವೆಂದು ನಾನು ನಿಮ್ಮ ಮುಂದೆ ಸ್ವಲ್ಪ ನಾಟಕ ಮಾಡಿದೆ. ತಾವು ಅನ್ಯಥಾ ಭಾವಿಸಬೇಡಿ' ಎಂದು ತನ್ನ ಅಧಿಕಪ್ರಸಂಗತನಕ್ಕೆ ಕ್ಷಮೆ ಕೋರಿ ನಮಸ್ಕಾರ ಮಾಡಿದನು.

ರಾಜನು 'ಭಲೇ ಅಜ್ಜ, ಮೆಚ್ಚಿದೆ ನಿನ್ನ ನಡವಳಿಕೆಯನ್ನು' ಎಂದು ಹೇಳಿ ಇಡೀ ಗಂಟನ್ನು ಅವನಿಗೆ ಕೊಟ್ಟು ಮುಂದೆ ಹೋಗಲು ಸರಿಯಾದ ಮಾರ್ಗವನ್ನು ಕೇಳಿ ಅಲ್ಲಿಂದ ಹೊರಟ.

**– ವಿ.ವಿಜಯೇಂದ್ರ ರಾವ್**




# ನಾನೂ ಶಾಲೆಗೆ ಹೋಗುವೆನಮ್ಮಾ..

ನಾನೂ ಶಾಲೆಗೆ ಹೋಗುವೆ ಅಮ್ಮಾ
ಶಶಿಯು ರವಿಯೂ ಹೊರಟಿಹರಮ್ಮಾ
ಜತೆಯಲಿ ನೀನೂ ಬಾರಮ್ಮಾ
ನಾ ಆಡುವ ಆಟವ ನೋಡಮ್ಮಾ

ಮೆಲ್ಲನೆ ಕುದುರೆಯನೇರುವೆನಮ್ಮಾ
ಏಣಿಯನೇರಿ ಇಳಿಯುವೆನಮ್ಮಾ
ಜಾರು ಬಂಡಿಯಲಿ ಜಾರುವೆನಮ್ಮಾ
ತಿರುಗುವ ತೊಟ್ಟಿಲಲಿ ತೂಗುವೆನಮ್ಮಾ

ಗೆಳೆಯರ ಜೊತೆಯಲಿ ಸೇರುವೆನಮ್ಮಾ
ಕಲಿಸಿದ ಹಾಡನು ಕಲಿಯುವೆನಮ್ಮಾ
ಅಕ್ಷರಗಳನು ಅರಿಯುವೆನಮ್ಮಾ
ಮಗ್ಗಿಯ ನೋಡದೆ ಹೇಳುವೆನಮ್ಮಾ

ಅಆ ಎಂಬುದ ಕಲಿಯುವೆನಮ್ಮಾ
ಅಕ್ಕರೆಯಲಿ ನಿನ್ನ ಕರೆಯುವೆನಮ್ಮಾ
ನಾನೂ ಶಾಲೆಗೆ ಹೋಗುವೆನಮ್ಮಾ
ಜತೆಯಲಿ ನೀನೂ ಬಾರಮ್ಮಾ

**– ಸುಶೀಲಾ ಸೋಮಶೇಖರ್, ಹಾಸನ**